ಮೇವುಂಡಿ ಕುಡಿಯುವ ನೀರಿನ ಯೋಜನೆ

35 - ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೇವುಂಡಿ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು?*

ಆ) *ಈ ಯೋಜನೆಯನ್ನು ಪೂರ್ಣಗೊಳಿಸಲಾಗಿದೆಯೇ?*

ಇ) *ಇಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು?*

ಈ) *ಈ ಯೋಜನೆ ಪೂರ್ಣಗೊಳಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೆ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಮುಂಡರಗಿ ತಾ : ಮೇವುಂಡಿ ಗ್ರಾಮಕ್ಕೆ ಕೊಳವೆನೀರು ಸರಬರಾಜು ಯೋಜನೆಯನ್ನು ಮಾರ್ಚ್-88ರಲ್ಲಿ ಕಾರ್ಯಗತಗೊಳಿಸಲಾಗಿದ್ದು, ಸದರಿ ಯೋಜನೆಯ ನೀರಿನಲ್ಲಿ ಅಧಿಕ ಫ್ಲೋರೈಡ್ ಕಂಡುಬಂದಿದ್ದರಿಂದ, ಸದರಿ ಗ್ರಾಮದಲ್ಲಿ ಡಿ-ಫ್ಲೋರಿಡೇಶನ್ ಸ್ಥಾವರವನ್ನು ಸ್ಥಾಪಿಸುವ ಕೆಲಸವನ್ನು ನೀರಿನ ತಾಂತ್ರಿಕ ನಿಯೋಗದಡಿ ಮಾರ್ಚ್-90ರಲ್ಲಿ ಪ್ರಾರಂಭಿಸಿ ಮಾರ್ಚ್-95ರಲ್ಲಿ ಪೂರ್ಣಗೊಳಿಸಲಾಗಿದೆ. ಅಲ್ಲದೆ, ಸದರಿ ಗ್ರಾಮಕ್ಕೆ ಗದಗ-ಬೆಟಗೇರಿ ನೀರು ಸರಬರಾಜು ಕೊಳವೆ ಮಾರ್ಗದಿಂದ ಶುದ್ಧೀಕರಿಸಿದ ನೀರನ್ನು ಒದಗಿಸಲಾಗುತ್ತಿದೆ.

ಆ) ಯೋಜನೆಯನ್ನು ಪೂರ್ಣಗೊಳಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ನೆದರ್‌ಲ್ಯಾಂಡ್ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತ ಗೊಳಿಸುವುದು

36 - ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೆದರ್‌ಲ್ಯಾಂಡ್ ದೇಶದ ಸಹಾಯದಿಂದ ರಾಜ್ಯದಲ್ಲಿ ನಿರ್ಮಾಣವಾಗುತ್ತಿರುವ ಕುಡಿಯುವ ನೀರಿನ ಯೋಜನೆಗಳು ಯಾವುವು ? ಹಾಗೂ ಇವುಗಳ ಒಟ್ಟು ಅಂದಾಜು ವೆಚ್ಚವೆಷ್ಟು? ಹಾಗೂ ಇಲ್ಲಿಯವರೆಗೆ ಆದಂತಹ ವೆಚ್ಚವೆಷ್ಟು?*

ಆ) *ನರಗುಂದ ಮತಕ್ಷೇತ್ರದಲ್ಲಿ ಈ ಯೋಜನೆಯ ಅಡಿಯಲ್ಲಿ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ? ಇಲ್ಲಿಯವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?*

ಇ) ಗ್ರಾಮ ನೈರ್ಮಲ್ಯಕ್ಕೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

ಈ) ಹುಲ್ಲೂರು ಹಾಗೂ ಸೋಮನಕಟ್ಟಿ ಗ್ರಾಮಗಳಲ್ಲಿ ಬಾವಿ ಕೊರೆಯುವ ಕೆಲಸ ಪ್ರಾರಂಭವಾಗಿದೆಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :

ಅ) ನೆದರ್‌ಲ್ಯಾಂಡ್ ದೇಶದ ಸಹಾಯದಿಂದ ಕರ್ನಾಟಕ ರಾಜ್ಯದ ಒಟ್ಟು 5 ಜಿಲ್ಲೆಗಳ ನ್ನೊಳಗೊಂಡ 201 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲಾಗಿದೆ.

ಅವುಗಳ ವಿವರ ಈ ಕೆಳಗಿನಂತಿದೆ.

1.	ಧಾರವಾಡ ಜಿಲ್ಲೆ	38 ಗ್ರಾಮಗಳು
2.	ಹಾವೇರಿ ಜಿಲ್ಲೆ	58 ಗ್ರಾಮಗಳು
3.	ಗದಗ ಜಿಲ್ಲೆ	33 ಸದರ
4.	ಬಿಜಾಪುರ ಜಿಲ್ಲೆ	41 ಸದರ
5.	ಬಾಗಲಕೋಟೆ ಜಿಲ್ಲೆ	32 ಸದರ
	ಒಟ್ಟು	**201**

ಇವುಗಳ ಅಂದಾಜು ವೆಚ್ಚ ರೂ. 8851.00 ಲಕ್ಷಗಳು ಇಲ್ಲಿಯವರೆಗೆ ಆದ ವೆಚ್ಚ ರೂ. 4875.00 ಲಕ್ಷಗಳು

ಆ) 1. ನರಗುಂದ ಮತಕ್ಷೇತ್ರದಲ್ಲಿ 25 ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ ಕೈಗೆತ್ತಿಕೊಳ್ಳಲಾಗಿದೆ.

2. ಇಲ್ಲಿಯವರೆಗೆ ಈ ಕೆಲಸಗಳಿಗೆ ಆದ ವೆಚ್ಚ ರೂ. 744.71 ಲಕ್ಷಗಳು.

ಇ) ಮೇಲಿನ ಮತಕ್ಷೇತ್ರದಲ್ಲಿ ನೈರ್ಮಲ್ಯ ಕಾಮಗಾರಿಗಳಿಗಾಗಿ ಯೋಜನೆಯ ಪ್ರಾರಂಭದಿಂದ ಆದ ವೆಚ್ಚ ರೂ 65.00 ಲಕ್ಷಗಳು.

ಈ) ಹುಲ್ಲೂರು ಹಾಗೂ ಸೋಮನಕಟ್ಟಿ ಗ್ರಾಮಗಳಲ್ಲಿ ಬಾವಿ ಕೊರೆಯುವ ಕೆಲಸ ಪ್ರಾರಂಭವಾಗಿದೆ.

ಹಾಸನ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆ

37 - ಶ್ರೀ ಶಿವರಾಮು ಬಿ. (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳು ಪೂರ್ಣಗೊಳ್ಳದೆ ಬಾಕಿ ಇರುವುದು ಎಷ್ಟು?